# ಕರ್ನಾಟಕ ವಿಧಾನಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 2079 |
| ಸದಸ್ಯರ ಹೆಸರು | ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 25.03.2026 |
| ಉತ್ತರಿಸುವ ಸಚಿವರು | ಲೋಕೋಪಯೋಗಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಹಾಸನ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ರಾಜ್ಯ ಹೆದ್ದಾರಿಗಳು ಎಷ್ಟು; ರಸ್ತೆಗಳು ಹಾಳಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ; | ಹಾಸನ ಜಿಲ್ಲೆಯ ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿ 1310.76 ಕಿ.ಮೀ ಉದ್ದದ 62 ರಾಜ್ಯ ಹೆದ್ದಾರಿಗಳಿದ್ದು, ಅವುಗಳಲ್ಲಿ 66.76 ಕಿ.ಮೀ ಉದ್ದದ ಸಿ.ಸಿ ರಸ್ತೆ, 1225.00 ಕಿ.ಮೀ ಉದ್ದದ ಬಿ.ಟಿ ರಸ್ತೆಯಿದ್ದು, 19.00 ಕಿ.ಮೀ ನಾನ್ ಮೋಟರಬಲ್ ರಸ್ತೆ ಬರುತ್ತಿದೆ. ಸದರಿ ಜಿಲ್ಲೆಯಲ್ಲಿ ರಾಜ್ಯ ಹೆದ್ದಾರಿ ಭಾಗಶಃ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.<br>ಸದರಿ ಜಿಲ್ಲೆಯಲ್ಲಿ ಹಾಳಾದ ರಸ್ತೆಗಳನ್ನು 2025-26ನೇ ಸಾಲಿನಲ್ಲಿ ರಾಜ್ಯ ಹೆದ್ದಾರಿ ರಸ್ತೆಗಳ ನಿರ್ವಹಣೆಗಾಗಿ ಲೆಕ್ಕಶೀರ್ಷಿಕೆ 3054-04-117-0-05-200 ಅಡಿಯಲ್ಲಿ ರೂ.1939.21 ಲಕ್ಷಗಳ ಅನುದಾನವಿದ್ದು, ಒಟ್ಟಾರೆಯಾಗಿ 1015.12 ಕಿ.ಮೀ ರಸ್ತೆಯನ್ನು ನಿರ್ವಹಣೆ ಮಾಡಿ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿರುತ್ತದೆ.<br>ಮುಂದುವರೆದು, ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿ ಹಂತ-5 ಘಟ್ಟ-2 ರಡಿ 4 ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ರೂ.50.00 ಕೋಟಿ ಅಂದಾಜು ಮೊತ್ತದಲ್ಲಿ 27.1 ಕಿ.ಮೀ ಕೈಗೆತ್ತಿಕೊಂಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. |
| ಆ | ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ ಬೇಲೂರು ಸಕಲೇಶಪುರ ಮಾರ್ಗದ ರಸ್ತೆ ಸಂಪೂರ್ಣ ಹಾಳಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ; ನೂತನ ರಸ್ತೆ ಮಾಡುವ ಬಗ್ಗೆ ಸರ್ಕಾರ ಚಿಂತಿಸಿದೆಯೇ; ಚಿಂತಿಸಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಯಾವ ಕಾಲಮಿತಿಯೊಳಗೆ ರಸ್ತೆ ಮಾಡಲಾಗುವುದು; ರಸ್ತೆ ದುರಸ್ತಿಯಾದಲ್ಲಿ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ಹಾಸನ ಜಿಲ್ಲೆ, ಬೇಲೂರು ತಾಲ್ಲೂಕು ಬೇಲೂರಿನಿಂದ ಸಕಲೇಶಪುರದ ವರೆಗೆ ಒಟ್ಟಾರೆ 36.74 ಕಿ.ಮೀ ಉದ್ದದ ರಸ್ತೆಯಿದ್ದು, ಈ ಕೆಳಕಂಡಂತೆ ಕಾಮಗಾರಿ ಕೈಗೊಳ್ಳಲಾಗಿದೆ.<br>1. ಬೇಲೂರಿನಿಂದ ಬಿಕ್ಕೋಡುವರೆಗೆ-ಸದರಿ ರಸ್ತೆಯು ರಾಜ್ಯ ಹೆದ್ದಾರಿ-110 ಆಗಿದ್ದು, ಬೇಲೂರು ಕೊಡ್ಲಿಪೇಟೆ ರಸ್ತೆಯಾಗಿರುತ್ತದೆ. ರಸ್ತೆಯ ಸರಪಳಿ 0.00 ಯಿಂದ 11.00 ಕಿ.ಮೀ ವರೆಗೆ ಇರುತ್ತದೆ. ಸದರಿ ಸರಪಳಿಯಲ್ಲಿ 0.00 ಯಿಂದ 0.55 ಕಿ.ಮೀ ವರೆಗೆ PRAMC ವತಿಯಿಂದ 4 ಪಥದ ರಸ್ತೆ ಅಗಲೀಕರಣ ಕೆಲಸವು ಪ್ರಗತಿಯಲ್ಲಿರುತ್ತದೆ. 0.50 ಕಿ.ಮೀ ಯಿಂದ 2.00 ಕಿ.ಮೀ ವರೆಗೆ 5.50 ಮೀ ಅಗಲಕ್ಕೆ ರಸ್ತೆ ನಿರ್ಮಾಣಕ್ಕಾಗಿ CMIDP ಲೆಕ್ಕಶೀರ್ಷಿಕೆ ಅಡಿ 215.00 ಲಕ್ಷಗಳಿಗೆ ಕಾಮಗಾರಿ ಅನುಮೋದನೆಗೊಂಡಿದ್ದು, ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ. ಕಿ.ಮೀ 2.00 ರಿಂದ 9.80 ಕಿ.ಮೀ ವರೆಗೆ 5.50 ಮೀ ಅಗಲದ ರಸ್ತೆಯನ್ನು 3054-ರಾಜ್ಯ ಹೆದ್ದಾರಿ ನಿರ್ವಹಣೆ ಲೆಕ್ಕಶೀರ್ಷಿಕೆ ಅಡಿ 25.00 ಲಕ್ಷಗಳ ಮೊತ್ತದಲ್ಲಿ ನಿರ್ವಹಣೆ ಮಾಡಲಾಗಿರುತ್ತದೆ. ಕಿ.ಮೀ 9.80 ರಿಂದ 11.00 ಕಿ.ಮೀ ವರೆಗೆ 5054-ORF ಅಡಿಯಲ್ಲಿ ರೂ.75.00 ಲಕ್ಷಗಳ ಅಂದಾಜು ಮೊತ್ತದಲ್ಲಿ 5.50 ಮೀ ಅಗಲಕ್ಕೆ ಹೊಸದಾಗಿ ರಸ್ತೆಯ ನಿರ್ಮಾಣ ಮಾಡಲಾಗುತ್ತದೆ. |

| | | |
|---|---|---|
| | | 2. ಬಿಕ್ಕೋಡಿನಿಂದ ಕೈಮರ ಕ್ರಾಸ್‌ವರೆಗೆ- ಸದರಿ ರಸ್ತೆಯು ರಾಜ್ಯ ಹೆದ್ದಾರಿ -112 ಆಗಿದ್ದು, ಬೇಲೂರು ಸೋಮವಾರಪೇಟೆ ರಸ್ತೆಯಾಗಿರುತ್ತದೆ. ಸದರಿ ರಸ್ತೆಯ ಸರಪಳಿ 0.00 ಯಿಂದ 2.00 ಕಿ.ಮೀ ವರೆಗಿನ ರಸ್ತೆಯು 2025-26ನೇ ಸಾಲಿನಲ್ಲಿ 3054- ರಾಜ್ಯ ಹೆದ್ದಾರಿ ನಿರ್ವಹಣೆ ಅಡಿಯಲ್ಲಿ ರೂ.2.00 ಲಕ್ಷ ಅಂದಾಜು ಮೊತ್ತದಲ್ಲಿ ನಿರ್ವಹಣೆ ಮಾಡಲಾಗಿರುತ್ತದೆ.<br><br>3. ಕೈಮರ ಕ್ರಾಸ್ ನಿಂದ ಅರೇಹಳ್ಳಿವರೆಗೆ- ಸದರಿ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಅರೇಹಳ್ಳಿ ಬಿಕ್ಕೋಡು ರಸ್ತೆಯಾಗಿರುತ್ತದೆ. 5.50 ಮೀ ಅಗಲವಿರುತ್ತದೆ. ಸದರಿ ರಸ್ತೆಯ ಸರಪಳಿ 0.00 ಯಿಂದ 8.40 ಕಿ.ಮೀ ವರೆಗಿನ ರಸ್ತೆಯು 2025-26ನೇ ಸಾಲಿನ 3054- ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಅಡಿಯಲ್ಲಿ ರೂ.9.00 ಲಕ್ಷ ಅಂದಾಜು ಮೊತ್ತದಲ್ಲಿ ನಿರ್ವಹಣೆ ಮಾಡಲಾಗಿರುತ್ತದೆ.<br><br>4. ಅರೇಹಳ್ಳಿಯಿಂದ ಬ್ಯಾದನವರೆಗೆ-ಸದರಿ ರಸ್ತೆಯು ರಾಜ್ಯ ಹೆದ್ದಾರಿ-27 ಆಗಿದ್ದು, ವಿರಾಜಪೇಟೆ -ಬೈಂದೂರು ರಸ್ತೆಯಾಗಿರುತ್ತದೆ. ಸದರಿ ರಸ್ತೆ ಸರಪಳಿ 153.27 ರಿಂದ 146.27 (7.00 ಕಿ.ಮೀ) ವರೆಗಿನ ರಸ್ತೆಯು 5.50 ಮೀ ಅಗಲವಿದ್ದು, ರಸ್ತೆಯ ಸರಪಳಿ 148.00 ರಿಂದ 150.00 ಕಿ.ಮೀ ವರೆಗೆ 2022-23 ನೇ ಸಾಲಿನ 5054- ರಾಜ್ಯ ಹೆದ್ದಾರಿ ನವೀಕರಣ ಅಡಿಯಲ್ಲಿ 150.00 ಲಕ್ಷಗಳ ಅಂದಾಜು ಮೊತ್ತದಲ್ಲಿ ರಸ್ತೆ ನವೀಕರಣ ಕೆಲಸ ಕೈಗೊಳ್ಳಲಾಗಿರುತ್ತದೆ. ಉಳಿದ ಸರಪಳಿಯನ್ನು 3054-ರಾಜ್ಯ ಹೆದ್ದಾರಿ ನಿರ್ವಹಣೆ ಅಡಿಯಲ್ಲಿ ನಿರ್ವಹಣೆ ಮಾಡಲಾಗಿರುತ್ತದೆ.<br><br>5. ಬ್ಯಾದನಯಿಂದ-ಸಕಲೇಶಪುರ(ತೇಜಸ್ವಿನಿ ಥೀಯೆಟರ್)- ಸದರಿ ರಸ್ತೆಯು ರಾಜ್ಯ ಹೆದ್ದಾರಿ-27 ಆಗಿದ್ದು, ವಿರಾಜಪೇಟೆ-ಬೈಂದೂರು ರಸ್ತೆಯಾಗಿರುತ್ತದೆ. ಸರಪಳಿ 146.27 ರಿಂದ 137.93 (8.40 ಕಿ.ಮೀ) ವರೆಗಿನ ರಸ್ತೆಯು 5.50 ಮೀ ಅಗಲವಿರುತ್ತದೆ. ಸದರಿ ರಸ್ತೆಯನ್ನು 2022-23 ನೇ ಸಾಲಿನಲ್ಲಿ 5054- ORF ಅಡಿಯಲ್ಲಿ ರೂ.400.00 ಲಕ್ಷ ಅಂದಾಜು ಮೊತ್ತದಲ್ಲಿ ರಸ್ತೆ ಅಭಿವೃದ್ಧಿ ಪಡಿಸಲಾಗಿರುತ್ತದೆ. |
| ಇ) | ಹಾಸನ ಜಿಲ್ಲೆಯಲ್ಲಿರುವ ಲೋಕೋಪಯೋಗಿ ಇಲಾಖಾ ವ್ಯಾಪ್ತಿಯಲ್ಲಿ ಬರುವ ಪ್ರವಾಸಿ ಮಂದಿರಗಳು ಎಷ್ಟು; ಎಲ್ಲಿ ಮತ್ತು ಅದರ ನಿರ್ವಹಣೆಗೆ ಪ್ರತಿ ತಿಂಗಳು ತಗಲುತ್ತಿರುವ ವೆಚ್ಚ ಎಷ್ಟು; ಪ್ರವಾಸಿ ಮಂದಿರಗಳಲ್ಲಿ ಖಾಸಗಿ ವಾಹನಗಳನ್ನು ನಿಲ್ಲಿಸಿ ತಮ್ಮ ಕೆಲಸಗಳಿಗೆ ತೆರಳುತ್ತಿದ್ದು, ಇದಕ್ಕೆ ಸರ್ಕಾರ ಯಾವ ಕ್ರಮ ವಹಿಸಲಾಗಿದೆ; | ಹಾಸನ ವಿಭಾಗ ವ್ಯಾಪ್ತಿಯಲ್ಲಿ, ಒಟ್ಟಾರೆಯಾಗಿ 33 ಸಂಖ್ಯೆ ಪ್ರವಾಸಿ ಮಂದಿರಗಳಿದ್ದು, ಅವುಗಳಲ್ಲಿ 123 ಸಂಖ್ಯೆ ಕೊಠಡಿಗಳಿದ್ದು, ಪ್ರತಿ ತಿಂಗಳು ಅವುಗಳ ನಿರ್ವಹಣೆಗಾಗಿ 1106000.00 ಮೊತ್ತ ವೆಚ್ಚವಾಗುತ್ತಿರುತ್ತದೆ. ಪ್ರವಾಸಿ ಮಂದಿರಗಳಲ್ಲಿ ಖಾಸಗಿ ವಾಹನಗಳಿಗೆ ಪ್ರವೇಶವನ್ನು ನಿರ್ಬಂಧಿಸಲಾಗಿರುತ್ತದೆ. |
| ಈ) | ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ಬಿಕ್ಕೋಡು ಹೋಬಳಿಯ ಕೋಗಿಲಮನೆ ಮಾರ್ಗ ಕೌರಿ, ಕುಶವಾರ ತೋಳಲು ತಲುಪುವ ರಸ್ತೆ ಹಾಳಾಗಿದ್ದು, ಸದರಿ ರಸ್ತೆಯನ್ನು ನೂತನ ರಸ್ತೆ ಮಾಡುವ ಬಗ್ಗೆ ಸರ್ಕಾರ ಚಿಂತಿಸಿದೆಯೇ; ಚಿಂತಿಸಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ರಸ್ತೆ ದುರಸ್ತಿ ಕಾಮಗಾರಿ ಮಾಡಿದ್ದಲ್ಲಿ ಅದಕ್ಕೆ ಬಿಡುಗಡೆಯಾದ ಅನುದಾನ ಎಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | • ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ಬಿಕ್ಕೋಡು ಹೋಬಳಿಯ ಕೋಗಿಲಮನೆ ಮಾರ್ಗ ಕೌರಿ, ಕುಶವಾರ ತೋಳಲು ತಲುಪುವ ರಸ್ತೆ ತಗರೆ-ತೊಳಲು ಜಿಲ್ಲಾ ಮುಖ್ಯ ರಸ್ತೆಯಾಗಿರುತ್ತದೆ. ರಸ್ತೆಯ ಒಟ್ಟು ಉದ್ದ 7.90 ಕಿ.ಮೀ ಆಗಿರುತ್ತದೆ. ರಸ್ತೆಯು 3.75 ಮೀ ಅಗಲಕ್ಕೆ ಡಾಂಬರು ಮೇಲ್ಮೈ ಹೊಂದಿರುತ್ತದೆ. ಸದರಿ ರಸ್ತೆ ಸರಪಳಿ 5.00 ರಿಂದ 6.10 ಕಿ.ಮೀ ವರೆಗೆ 2024-25 ನೇ ಸಾಲಿನ 5054-ORF ಅಡಿಯಲ್ಲಿ ರೂ:100.00 ಲಕ್ಷಗಳ ಅಂದಾಜು ಮೊತ್ತದಲ್ಲಿ ಮರು ನಿರ್ಮಾಣಗೊಳಿಸಲಾಗಿರುತ್ತದೆ. |

| | | |
|---|---|---|
| | | • ಸದರಿ ರಸ್ತೆಯು ಕಿ.ಮೀ 0.00 ರಿಂದ 5.00 ಕಿ.ಮೀ ವರೆಗೆ ರಸ್ತೆಯನ್ನು 2025-26 ನೇ ಸಾಲಿನ 3054- ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಲೆಕ್ಕಶೀರ್ಷಿಕೆ ಅಡಿಯಲ್ಲಿ ರೂ:5.00 ಲಕ್ಷಗಳ ಅಂದಾಜು ಮೊತ್ತದಲ್ಲಿ ನಿರ್ವಹಣೆ ಮಾಡಲಾಗಿದ್ದು, ಉತ್ತಮ ಸ್ಥಿತಿಯಲ್ಲಿರುತ್ತದೆ.<br>• ಸದರಿ ರಸ್ತೆ ಸರಪಳಿ 6.10 ರಿಂದ 7.90 ಕಿ.ಮೀ ವರೆಗೆ ರಸ್ತೆಯು ಸುಸ್ಥಿತಿಯಲ್ಲಿ ಇಲ್ಲದೇ ಇದ್ದು, 2025-26 ನೇ ಸಾಲಿನ 3054- ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಲೆಕ್ಕಶೀರ್ಷಿಕೆ ಅಡಿಯಲ್ಲಿ ರೂ:4.00 ಲಕ್ಷಗಳ ಅಂದಾಜು ಮೊತ್ತದಲ್ಲಿ ನಿರ್ವಹಣೆ ಮಾಡಲಾಗಿರುತ್ತದೆ.<br>• ಎಸ್.ಹೆಚ್.ಡಿ.ಪಿ. ಘಟ್ಟ-5 ಹಂತ-2 ರಲ್ಲಿ ಸಂಪೂರ್ಣ ಅಭಿವೃದ್ಧಿಗಾಗಿ 235.00 ಲಕ್ಷಗಳ ಅನುದಾನದೊಂದಿಗೆ ಅನುಮೋದನೆಗಾಗಿ ಪ್ರಸ್ತಾವನೆ ಸ್ವೀಕೃತವಾಗಿದ್ದು, ಪ್ರಸ್ತಾವನೆ ಪರಿಶೀಲನೆಯಲ್ಲಿದೆ. |

**ಸಂಖ್ಯೆ: ಲೋಇ 56 ಸಿಡಬ್ಲ್ಯೂಎಸ್ 2026**

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು